# KARNATAKA LOKAYUKTA

No:UPLOK-2/DE/1061/2017/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 22.01.2021.

## RECOMMENDATION

Sub:- Departmental inquiry against: (1) Sri Hanumantharayappa, Incharge Secretary and Panchayath Development Officer, Doddanaravangala Gram Panchayath, Tumkur District and (2) Sri Ramakumar, Executive Officer, Taluk Panchayath, Tumkur District - reg.

Ref:- 1) Government Order No. RDP 183 VSB 2017 dated 22.09.2017.

2) Nomination order No. UPLOK-2/DE/1061/2017 dated 19.10.2017 of Upalokayukta, State of Karnataka.

3) Inquiry report dated 22.01.2021 of Additional Registrar of Enquiries-14, Karnataka Lokayukta, Bengaluru.

~~~~~

The Government by its order dated 22.09.2017 initiated the disciplinary proceedings against (1) Sri Hanumantharayappa, Incharge Secretary and Panchayath Development Officer, Doddanaravangala Gram Panchayath, Tumkur District and (2) Sri Ramakumar, Executive Officer, Taluk Panchayath, Tumkur District, [hereinafter referred to as Delinquent Government Officials, for
~~~~~

short as 'DGOs 1 and 2' respectively] and entrusted the departmental inquiry to this Institution.

2. This Institution by Nomination Order No. UPLOK-2/DE/1061/2017 dated 19.10.2017 nominated Additional Registrar of Enquiries-7, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them. Subsequently, by order No. Uplok-1&2/DE/Transfers/2018 dated 6.8.2018, Additional Registrar of Enquiries-14, Karnataka Lokayukta, Bengaluru, was re-nominated as the Inquiry Officer to continue the said departmental inquiry against DGOs.

3. The DGOs 1 and 2 were tried for the following charges :-

""ಅ) 1ನೇ ಆ.ಸ.ನೌ.ರ ಶ್ರೀ.ಹನುಮಂತರಾಯಪ್ಪ ಆದ ನೀವು ಪ್ರಭಾರ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಆಗಿ ದೊಡ್ಡನಾರವಂಗಲ ಗ್ರಾಮ ಪಂಚಾಯತಿ, ತುಮಕೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಹಾಗೂ 2ನೇ ಆ.ಸ.ನೌ.ರ ಶ್ರೀ.ರಾಮಕುಮಾರ್ ಆದ ನೀವು ಕಾರ್ಯನಿರ್ವಾಹಕ ಅಧಿಕಾರಿ ಆಗಿ ತಾಲ್ಲೂಕು ಪಂಚಾಯತಿ, ತುಮಕೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ತುಮಕೂರು ಜಿಲ್ಲೆ ಮತ್ತು ತಾಲ್ಲೂಕು ದೊಡ್ಡನಾರವಂಗಲ ಗ್ರಾಮದ ನಿವೇಶನ ಸಂ.69, ಖಾತಾ ಸಂ.190ರ ಮಾಲೀಕರಾದ ಶ್ರೀ.ನರಸೇಗೌಡ ಬಿನ್ ಚಿಕ್ಕಉಗ್ರಯ್ಯ ರವರಿಗೆ ಪೂರ್ವ–ಪಶ್ಚಿಮ 27 ಅಡಿ, ಉತ್ತರ–ದಕ್ಷಿಣ 55 ಅಡಿ ಮನೆ ಕಟ್ಟಲು ಪರವಾನಗಿ ನೀಡಿದ್ದು, ನಂತರ ಪೂರ್ವ–ಪಶ್ಚಿಮ 25 ಅಡಿ, ಉತ್ತರ–ದಕ್ಷಿಣ 45 ಅಡಿಗಳಿಗೆ ಮಾರ್ಪಡಿಸಿ 1ನೇ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿದ್ದೀರಿ.

ಆ) ಮುಂದುವರೆದು, ಶ್ರೀ.ನರಸೇಗೌಡ ಬಿನ್ ಚಿಕ್ಕಉಗ್ರಯ್ಯ ರವರು ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಿಸಿರುವ ಬಗ್ಗೆ ದೂರುದಾರರು ಹಲವಾರು ಬಾರಿ ಆ.ಸ.ನೌ.ರರಾದ ನಿಮ್ಮ ಗಮನಕ್ಕೆ ತಂದರೂ ಸಹ ಸ್ಥಳ ಪರಿಶೀಲನೆ ಮಾಡಿ, ಒತ್ತುವರಿಯಾದ ಸಾರ್ವಜನಿಕ/ಸರ್ಕಾರಿ ರಸ್ತೆಯಲ್ಲಿ ನಿರ್ಮಿಸಲಾದ ಕಟ್ಟಡದ ಅನಧಿಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯಲೋಪ ಎಸಗಿದ್ದೀರಿ.

ಇ) ಮುಂದುವರೆದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ರವರು ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಹಾಗೂ 1ನೇ ಆ.ಸ.ನೌ.ರರ ವಿರುದ್ಧ ಕ್ರಮ ಜರುಗಿಸುವಂತೆ 2ನೇ ಆ.ಸ.ನೌ.ರರಾದ ನಿಮಗೆ ಲಿಖಿತ ಆದೇಶ ಹೊರಡಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯಲೋಪ ಎಸಗಿರುತ್ತೀರಿ.

ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ."

4. The Inquiry Officer (Additional Registrar of Enquiries-14) on proper appreciation of oral and documentary evidence has held that, the above charge against the DGO.1 Sri Hanumantharayappa, Incharge Secretary and Panchayath Development Officer, Doddanaravangala Gram Panchayath, Tumkur District, is ' proved '.

5. Further, the Inquiry Officer (Additional Registrar of Enquiries- 14) on proper appreciation of oral and documentary evidence has held that, the above charge against the DGO.2 Sri Ramakumar, Executive Officer, Taluk Panchayath, Tumkur District, is ' not proved'.

6. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer and exonerate DGO.2 Sri Ramakumar, Executive Officer, Taluk Panchayath, Tumkur District, of the charges leveled against him.

7. As per the First Oral Statement furnished by the Enquiry Officer, DGO-1 Sri. Hanumantharayappa, is due for retirement from service on 31.05.2024;

8. Therefore, having regard to the nature of charge *'proved'* against DGO.1 Sri. Hanumantharayappa, Incharge Secretary and Panchayath Development Officer, Doddanaravangala Gram Panchayath, Tumkur District and considering the totality of circumstances, it is hereby recommended to the Government;

i) to impose penalty of ' withholding 3 annual increments payable to DGO 1 Sri Hanumantharayappa, Incharge Secretary and Panchayath Development Officer, Doddanaravangala Gram Panchayath, Tumkur District, with cumulative effect.

9. Action taken in the matter shall be intimated to this Authority.

Connected records are enclosed herewith.

22/1/21

(JUSTICE B.S.PATIL)
Upalokayukta,
State of Karnataka.

*BS**

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ–1061/2017/ಎ.ಆರ್.ಇ–14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 22/01/2021.

## ವಿಚಾರಣಾ ವರದಿ

ಉಪಸ್ಥಿತರು: **ಕೆ.ಭಾಗ್ಯ,** ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ – (1) ಶ್ರೀ. **ಹನುಮಂತರಾಯಪ್ಪ,** ಪ್ರಭಾರ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ದೊಡ್ಡನಾರವಂಗಲ ಗ್ರಾಮ ಪಂಚಾಯತಿ, ತುಮಕೂರು ಜಿಲ್ಲೆ ಮತ್ತು (2) ಶ್ರೀ. **ರಾಮಕುಮಾರ್,** ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತುಮಕೂರು ಜಿಲ್ಲೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ/8067/2015/ಸನಿಕಾಸ–1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 18/05/2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 183 ವಿಸೇಬಿ 2017, ಬೆಂಗಳೂರು, ದಿನಾಂಕ: 22/09/2017.
3. ನಾಮನಿರ್ದೇಶನ ಸಂಖ್ಯೆ: ಉಪಲೋಕ್–2/ಡಿಇ/1061/2017, ಬೆಂಗಳೂರು, ದಿನಾಂಕ: 19/10/2017.
4. Order No.UPLOK-1&2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಈ ದೂರನ್ನು, ದೂರುದಾರರಾದ ಶ್ರೀ. **ಡಿ ಪಾರ್ಥಸಾರಥಿ** ಬಿನ್ ದೊಡ್ಡರಂಗಪ್ಪ, ದೊಡ್ಡವಾರವಂಗಲ ಅಂಚೆ, ಬೆಳ್ಳಾವಿ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ ರವರು

ಆಪಾದಿತ ಸರ್ಕಾರಿ ನೌಕರ (1) **ಶ್ರೀ. ಹನುಮಂತರಾಯಪ್ಪ,** ಪ್ರಭಾರ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ದೊಡ್ಡನಾರವಂಗಲ ಗ್ರಾಮ ಪಂಚಾಯತಿ, ತುಮಕೂರು ಜಿಲ್ಲೆ (2) **ಶ್ರೀ. ರಾಮಕುಮಾರ್,** ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತುಮಕೂರು ಜಿಲ್ಲೆ ರವರ ವಿರುದ್ಧ ಸಲ್ಲಿಸಿ, ಆ.ಸ.ನೌ–1 ರವರು ನಿವೇಶನ ಸಂಖ್ಯೆ: 69 ಹಾಗೂ ಖಾತಾ ನಂ.190ಕ್ಕೆ ಪೂರ್ವ ಪಶ್ಚಿಮ 27 ಅಡಿ ಹಾಗೂ ಉತ್ತರ ದಕ್ಷಿಣ 55 ಅಡಿಗಳಿಗೆ ಅಕ್ರಮವಾಗಿ ದಾಖಲೆ ಇಲ್ಲದೆ ದಿನಾಂಕ: 30/01/2015 ರಂದು ಕಟ್ಟಡ ಕಟ್ಟಲು ಪರವಾನಿಗೆ ನೀಡಿರುತ್ತಾರೆ. ಹೀಗಾಗಿ, ನರಸೇಗೌಡ ಬಿನ್ ಚಿಕ್ಕಉಗ್ರಯ್ಯ ರವರು ಹಳೆಯ ಮನೆಯನ್ನು ತೆರವುಗೊಳಿಸಿ ಪೂರ್ವ ಭಾಗದ ಕಮಲಮ್ಮನ ಮನೆಯ ಕಡೆಗೆ 6 ಅಡಿ ಜಾಗ ಬಿಟ್ಟು ಪಶ್ಚಿಮದ ರಸ್ತೆಯ ಕಡೆಗೆ 6 ಅಡಿ ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಕಾಂಕ್ರೀಟ್ ರಸ್ತೆಗೆ ಲಗತ್ತಾಗಿ ಚರಂಡಿಗೂ ಹಾಗೂ ಸೆಟ್ ಬಾಕ್ ಬಿಡದೆ ಕಾಂಕ್ರೀಡ್ ರಸ್ತೆಗೆ ಲಗತ್ತಾಗಿ ಮನೆಯನ್ನು ಕಟ್ಟಿರುತ್ತಾರೆ. ಈ ಬಗ್ಗೆ ದಿನಾಂಕ: 23/02/2015 ರಂದು ಗ್ರಾಮ ಪಂಚಾಯಿತಿಗೆ ದೂರು ಸಲ್ಲಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ದಿನಾಂಕ: 24/05/2015 ರಂದು ಕಾರ್ಯನಿರ್ವಾಹಣಾಧಿಕಾರಿಗಳು ತಾಲ್ಲೂಕು ಪಂಚಾಯಿತಿಗೆ ದೂರು ಸಲಿಸಿದಾಗ ಕಾರ್ಯನಿರ್ವಾಹಣಾಧಿಕಾರಿ ಶ್ರೀ. ರಾಮಕುಮಾರ್ ರವರು ಮಲ್ಲಸಂದ್ರ ಗ್ರಾಮ ಪಂಚಾಯತಿ ಪಿ.ಡಿ.ಓ ಶ್ರೀ. ದೇವರಾಜು ರವರಿಗೆ ದೂರವಾಣಿ ಕರೆ ಮಾಡಿ ಸ್ಥಳ ಪರಿಶೀಲಿಸಿ ಕಟ್ಟಡ ನಿರ್ಮಾಣ ಮಾಡುವುದನ್ನು ನೋಟಿಸ್ ನೀಡಿ ನಿಲ್ಲಿಸಬೇಕೆಂದು ಸೂಚಿಸಿದರು. ಆ ಪ್ರಕಾರ ಪಿ.ಡಿ.ಓ ರವರು ಸ್ಥಳ ಪರಿಶೀಲಿಸಿ ನೋಟಿಸ್ ನೀಡಿರುತ್ತಾರೆ. ದಿನಾಂಕ: 27/02/2015 ರಂದು ಉಪಕಾರ್ಯನಿರ್ವಾಣಾಧಿಕಾರಿಗಳು, ತುಮಕೂರು ಜಿಲ್ಲಾ ಪಂಚಾಯತಿ ರವರಿಗೆ ದೂರು ಸಲ್ಲಿಸಿದಾಗ ರವರು ಕಾರ್ಯನಿರ್ವಾಣಾಧಿಕಾರಿಗಳು, ತಾಲ್ಲೂಕು ಪಂಚಾಯತಿ ರವರಿಗೆ ದೂರವಾಣಿ ಕರೆ ಮಾಡಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಆದರೆ, ಸದರಿಯವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ, ಎನ್ನುವುದಾಗಿದೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ

ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 22/09/2017ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 19/10/2017 ರಂದು ಅಪರ ನಿಬಂಧಕರು, ವಿಚಾರಣೆಗಳು-7 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರುಗಳ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು-7 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ: 07/08/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ

"ಅ) 1ನೇ ಆ.ಸ.ನೌ.ರ ಶ್ರೀ.ಹನುಮಂತರಾಯಪ್ಪ ಆದ ನೀವು ಪ್ರಭಾರ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಆಗಿ ದೊಡ್ಡನಾರವಂಗಲ ಗ್ರಾಮ ಪಂಚಾಯತಿ, ತುಮಕೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಹಾಗೂ 2ನೇ ಆ.ಸ.ನೌ.ರ ಶ್ರೀ.ರಾಮಕುಮಾರ್ ಆದ ನೀವು ಕಾರ್ಯನಿರ್ವಾಹಕ ಅಧಿಕಾರಿ ಆಗಿ ತಾಲ್ಲೂಕು ಪಂಚಾಯತಿ, ತುಮಕೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ತುಮಕೂರು ಜಿಲ್ಲೆ ಮತ್ತು ತಾಲ್ಲೂಕು ದೊಡ್ಡನಾರವಂಗಲ ಗ್ರಾಮದ ನಿವೇಶನ ಸಂ.69, ಖಾತಾ ಸಂ.190ರ ಮಾಲೀಕರಾದ ಶ್ರೀ.ನರಸೇಗೌಡ ಬಿನ್

ಚಿಕ್ಕಉಗ್ರಯ್ಯ ರವರಿಗೆ ಪೂರ್ವ–ಪಶ್ಚಿಮ 27 ಅಡಿ, ಉತ್ತರ–ದಕ್ಷಿಣ 55 ಅಡಿ ಮನೆ ಕಟ್ಟಲು ಪರವಾನಗಿ ನೀಡಿದ್ದು, ನಂತರ ಪೂರ್ವ–ಪಶ್ಚಿಮ 25 ಅಡಿ, ಉತ್ತರ–ದಕ್ಷಿಣ 45 ಅಡಿಗಳಿಗೆ ಮಾರ್ಪಡಿಸಿ 1ನೇ ಆ.ಸ.ನೌ.ರರಾದ ನೀವು ಕರ್ತವ್ಯಲೋಪ ಎಸಗಿದ್ದೀರಿ.

ಆ) ಮುಂದುವರೆದು, ಶ್ರೀ.ನರಸೇಗೌಡ ಬಿನ್ ಚಿಕ್ಕಉಗ್ರಯ್ಯ ರವರು ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಿಸಿರುವ ಬಗ್ಗೆ ದೂರುದಾರರು ಹಲವಾರು ಬಾರಿ ಆ.ಸ.ನೌ.ರರಾದ ನಿಮ್ಮ ಗಮನಕ್ಕೆ ತಂದರೂ ಸಹ ಸ್ಥಳ ಪರಿಶೀಲನೆ ಮಾಡಿ, ಒತ್ತುವರಿಯಾದ ಸಾರ್ವಜನಿಕ/ಸರ್ಕಾರಿ ರಸ್ತೆಯಲ್ಲಿ ನಿರ್ಮಿಸಲಾದ ಕಟ್ಟಡದ ಅನಧಿಕೃತ ಭಾಗಗಳನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯಲೋಪ ಎಸಗಿದ್ದೀರಿ.

ಇ) ಮುಂದುವರೆದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ರವರು ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಹಾಗೂ 1ನೇ ಆ.ಸ.ನೌ.ರರ ವಿರುದ್ಧ ಕ್ರಮ ಜರುಗಿಸುವಂತೆ 2ನೇ ಆ.ಸ.ನೌ.ರರಾದ ನಿಮಗೆ ಲಿಖಿತ ಆದೇಶ ಹೊರಡಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯಲೋಪ ಎಸಗಿರುತ್ತೀರಿ.

ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ."

# ಅನುಬಂಧ-2

## ದೋಷಾರೋಪಣೆಯ ವಿವರ

## ಕಲಂ 12(3) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಅಡಿಯಲ್ಲಿ ಸಲ್ಲಿಸಿದ ವರದಿಯ ಯಥಾವತ್ತು ವಿವರಣೆಯಾಗಿರುತ್ತದೆ)

ಶ್ರೀ.ಡಿ.ಪಾರ್ಥಸಾರಥಿ ಬಿನ್ ದೊಡ್ಡರಂಗಪ್ಪ, ದೊಡ್ಡನಾರವಂಗಲ ಅಂಚೆ, ಬೆಳ್ಳಾವಿ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು 1) ಶ್ರೀ.ಹನುಮಂತರಾಯಪ್ಪ, ಪ್ರಭಾರ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ದೊಡ್ಡನಾರವಂಗಲ ಗ್ರಾಮ ಪಂಚಾಯತಿ, ತುಮಕೂರು ಜಿಲ್ಲೆ ಹಾಗೂ 2) ಶ್ರೀ.ರಾಮಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತುಮಕೂರು ಜಿಲ್ಲೆ ರವರುಗಳ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

<u>ಪ್ರಕರಣದ ಸಂಕ್ಷಿಪ್ತ ಸಾರಾಂಶ:-</u> ದೂರುದಾರರು ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಮತ್ತು ತಾಲ್ಲೂಕು ದೊಡ್ಡನಾರವಂಗಲ ಗ್ರಾಮದ ನಿವೇಶನ ಸಂ.69, ಖಾತಾ ಸಂ.190ರ ಮಾಲೀಕರಾದ ಶ್ರೀ.ನರಸೇಗೌಡ ಬಿನ್ ಚಿಕ್ಕಉಗ್ರಯ್ಯ ರವರಿಗೆ ಮನೆ ಕಟ್ಟಲು ಆ.ಸ.ನೌ.ರರು ಅನುಮತಿ ನೀಡಿದ್ದು, ಅದರಂತೆ ಸದರಿ ಕಟ್ಟಡದ ಮಾಲೀಕರು ಅನಧಿಕೃತವಾಗಿ ಮನೆ ನಿರ್ಮಿಸುತ್ತಿದ್ದು, ಸದರಿ ನಿವೇಶನದ ಮಾಲೀಕರಿಗೆ ಸಂಬಂಧಪಟ್ಟಂತೆ ಒಂದು ಹಳೆಯ ಮನೆ ಶ್ರೀಮತಿ.ಕಮಲಮ್ಮ ಎಂಬುವವರ ಮನೆಗೆ ಹೊಂದಿಕೊಂಡಂತಿದ್ದು, ಶ್ರೀ.ನರಸೇಗೌಡರು ಸದರಿ ಕಟ್ಟಡದ ಪಕ್ಕದ ಮನೆಯ ಮಾಲೀಕರಾದ ಶ್ರೀಮತಿ.ಕಮಲಮ್ಮರವರ ಮನೆಯ ಕಡೆಗೆ 6 ಅಡಿ ಜಾಗ ಬಿಟ್ಟು ನಿರ್ಮಿಸುತ್ತಿದ್ದು, ಸದರಿ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿದ್ದ 6 ಅಡಿ ಚರಂಡಿಗೆ ಬಿಟ್ಟಿದ್ದ ಆಸ್ತಿಯನ್ನು

ಒತ್ತುವರಿ ಮಾಡಿ ನಿರ್ಮಿಸಿದ್ದಾರೆ ಮತ್ತು ಸದರಿ ಕಟ್ಟಡಕ್ಕೆ ಸಂಬಂಧಪಟ್ಟಂತೆ ದಕ್ಷಿಣ ದಿಕ್ಕಿನಲ್ಲಿ ಸೆಟ್‌ಬ್ಯಾಕ್ ಬಿಟ್ಟಿರುವುದಿಲ್ಲ. ಸರ್ಕಾರದ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ನೀರಿನ ತೊಟ್ಟಿಯನ್ನು ನಿರ್ಮಿಸುತ್ತಿದ್ದು, ಕಟ್ಟಡ ನಿರ್ಮಿಸಲು ಆ.ಸ.ನೌ.ರರು ಅನುಮತಿ ನೀಡಿದ್ದಾರೆಂದು ಆಪಾದಿಸಿದ್ದರು.

ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು (ತನಿಖಾಧಿಕಾರಿ ಎಂದು ಕರೆಯಲಾಗುವುದು) ರವರಿಗೆ ಸೂಚಿಸಲಾಗಿ, ಸದರಿಯವರು ತನಿಖೆ ನಡೆಸಿ ವರದಿ ಸಲ್ಲಿಸುವಂತೆ 2ನೇ ಆ.ಸ.ನೌ.ರರಿಗೆ ಆದೇಶಿಸಿದ್ದು, 2ನೇ ಆ.ಸ.ನೌ.ರರು ಸ್ಥಳ ತನಿಖೆ ಮಾಡಿ ಸದರಿ ಒತ್ತುವರಿಯನ್ನು ತೆರವುಗೊಳಿಸಿರುವ ಬಗ್ಗೆ ಫೋಟೋ ಸಮೇತ ವರದಿ ಸಲ್ಲಿಸಿದ್ದು, ಛಾಯಾಚಿತ್ರಗಳಲ್ಲಿ ಸ್ಪಷ್ಟನೆ ಇಲ್ಲದ್ದರಿಂದ ಪುನ: 2ನೇ ಆ.ಸ.ನೌ.ರರಿಗೆ ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ಹಾಗೂ ಸದರಿ ಒತ್ತುವರಿ ಮಾಡಿರುವ ರಸ್ತೆ ಜಾಗವನ್ನು ಶೀಘ್ರವಾಗಿ ತೆರವುಗೊಳಿಸಲು ನಿಯಮಾನುಸಾರ ಪರಾಮರ್ಶಿಸಿ, ಸೂಕ್ತ ಕ್ರಮ ವಹಿಸಿ ನಿಯಮಬಾಹಿರವಾಗಿ ವರ್ತಿಸಿ ಕರ್ತವ್ಯ ಲೋಪ ಎಸಗಿರುವ ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಸಂಬಂಧ ಆರೋಪ ಪಟ್ಟಿಯನ್ನು ಅಗತ್ಯ ದಾಖಲೆಗಳೊಂದಿಗೆ ವರದಿ ಸಲ್ಲಿಸುವಂತೆ 2ನೇ ಆ.ಸ.ನೌ.ರರಿಗೆ ಹಲವಾರು ಬಾರಿ ತಿಳಿಸಿದರೂ ಸಹ ಸ್ಪಷ್ಟವಾದ ವರದಿಯನ್ನು ಸಲ್ಲಿಸಿಲ್ಲವೆಂದು ಹೇಳಿದ್ದರು.

1 ಮತ್ತು 2ನೇ ಆ.ಸ.ನೌ.ರರಿಗೆ ಸಾಕಷ್ಟು ಕಾಲಾವಕಾಶವನ್ನು ಕೊಟ್ಟರೂ ಸಹ ದೂರು ಮತ್ತು ತನಿಖಾಧಿಕಾರಿಗಳ ವರದಿಗೆ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

ದೂರು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ 1 ಮತ್ತು 2ನೇ ಆ.ಸ.ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠತೆಯನ್ನು ತೋರಿಸದೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾದ್ದರಿಂದ 1 ಮತ್ತು

2ನೇ ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕ್ರಮ ಜರುಗಿಸಬಹುದಾಗಿದೆ ಎಂದು ಕಂಡುಬಂದಿರುತ್ತದೆ.

ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ 1 ಮತ್ತು 2ನೇ ಆ.ಸ.ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (ii) ಮತ್ತು (iii)ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ 1 ಮತ್ತು 2ನೇ ಆ.ಸ.ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಆ.ಸ.ನೌ.ರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು 1 ಮತ್ತು 2ನೇ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ–2ರವರಿಗೆ ವಹಿಸಿ ಆದೇಶ ಮಾಡಿದೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌಕರರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ–2 ರವರು ದಿನಾಂಕ: 27/08/2018 ರಂದು ಹಾಜರಾಗಿದ್ದು ಮತ್ತು ಆ.ಸ.ನೌ–1 ರವರು ದಿನಾಂಕ: 04/03/2020 ರಂದು ಹಾಜರಾಗಿದ್ದು, ಸದರಿಯವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ.ರವರುಗಳು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ–1 ಮತ್ತು 2 ರವರಿಂದ ಆಕ್ಷೇಪಣೆಯನ್ನು ಕೇಳಲಾಗಿತ್ತು. ಆದರೆ, ಸದರಿಯವರು ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

7. ಆ.ಸ.ನೌ–1 ರವರು ಈ ಪ್ರಾಧಿಕಾರದ ಮುಂದೆ ಪುನಃ ತಮ್ಮ ಲಿಖಿತ ಹೇಳಿಕೆಯನ್ನು (written statement) ಸಲ್ಲಿಸಿರುವುದಿಲ್ಲ. ಆದರೆ, ಆ.ಸ.ನೌ–2 ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಅದರಲ್ಲಿ ತಾನು ದಿನಾಂಕ: 06/03/2015 ರಂದು ದೊಡ್ಡನಾರವಂಗಲ ಗ್ರಾಮಸ್ಥರಿಂದ ದೂರನ್ನು ಪಡೆದಿರುತ್ತೇನೆ. ಕೂಡಲೇ ದಿನಾಂಕ: 07/03/2015 ರಂದು ಆ.ಸ.ನೌ–1 ರವರಿಗೆ ಒತ್ತುವರಿ ಮಾಡಿರುವ ಸರ್ಕಾರಿ ಜಾಗವನ್ನು ತೆರವುಗೊಳಿಸಲು ನಿರ್ದೇಶನ ನೀಡಿರುತ್ತೇನೆ. ಆದ್ದರಿಂದ, ತಾನು ಯಾವುದೇ ರೀತಿಯ ಕರ್ತವ್ಯ ಲೋಪ ಎಸಗಿರುವುದಿಲ್ಲ. ನಂತರದಲ್ಲಿ ತನಗೆ ವರ್ಗಾವಣೆಯಾಗಿದ್ದು, ದಿನಾಂಕ: 06/04/2015 ರಂದು ಸದರಿ ಕಛೇರಿಯ ಕರ್ತವ್ಯದಿಂದ ಬಿಡುಗಡೆ ಹೊಂದಿರುತ್ತೇನೆ. ಆದ್ದರಿಂದ, ದೂರುದಾರರ ದೂರಿನ ಬಾಬ್ತು ಮುಂದುವರಿದ ಕ್ರಮವನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

8. ಈ ವಿಚಾರಣೆಯಲ್ಲಿ, ಆ.ಸ.ನೌ–1 ಮತ್ತು 2 ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು, ಅಂದಿನ ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ರವರಾಗಿದ್ದ ಶ್ರೀಮತಿ. ಮಮತ ರವರನ್ನು ಪಿ.ಡಬ್ಲ್ಯೂ.2 ಎಂತಲೂ, ಅಂದಿನ ತುಮಕೂರು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀ. ಗೋವಿಂದರಾಜು ರವರನ್ನು ಪಿ.ಡಬ್ಲ್ಯೂ.3 ಎಂತಲೂ, ನಿ.ಪಿ.1 ರಿಂದ 6 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

9. ತದನಂತರ, ಆ.ಸ.ನೌ–1 ಮತ್ತು 2 ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ಪಡೆದುಕೊಳ್ಳಲಾಗಿರುತ್ತದೆ.

10. ಆ.ಸ.ನೌ–1 ರವರು ತಮ್ಮ ಪರವಾಗಿ ಮೌಖಿಕ ಸಾಕ್ಷ್ಯವನ್ನಾಗಲೀ, ದಾಖಲಾತಿಗಳ ಸಾಕ್ಷ್ಯವನ್ನಾಗಲೀ ನೀಡಿರುವುದಿಲ್ಲ. ಆದರೆ, ಆ.ಸ.ನೌ–2 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ನಿ.ಡಿ.1 ರಿಂದ 3 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

11. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಆಲಿಸಲಾಯಿತು. ಆ.ಸ.ನೌ–2 ರವರು ಸಲ್ಲಿಸಿದ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

12. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ಮತ್ತು 2 ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

13. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

14. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1:** ಆ.ಸ.ನೌ–1 ರವರಿಗೆ ಸಂಬಂಧಪಟ್ಟಂತೆ **ಸಕಾರಾತ್ಮಕವಾಗಿ.**

ಆ.ಸ.ನೌ–2 ರವರಿಗೆ ಸಂಬಂಧಪಟ್ಟಂತೆ **ನಕಾರಾತ್ಮಕವಾಗಿ**

**ಅಂಶ 2:** **ಅಂತಿಮ ಆದೇಶದಂತೆ.**

## ಕಾರಣಗಳು

15. ಈ ಪ್ರಕರಣದಲ್ಲಿ ಆ.ಸ.ನೌ–1 ಮತ್ತು 2 ರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ. ಡಿ ಪಾರ್ಥಸಾರಥಿ ಬಿನ್ ದೊಡ್ಡರಂಗಪ್ಪ, ದೊಡ್ಡವಾರವಂಗಲ ಅಂಚೆ, ಬೆಳ್ಳಾವಿ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ ರವರ ಮೌಖಿಕ ಸಾಕ್ಷ್ಯವನ್ನು ನುಡಿಸಿಕೊಂಡು ನಿ.ಪಿ.1 ರಿಂದ 6 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

16. ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ "ನಾನು ಈ ದೂರನ್ನು ಹನುಮಂತರಾಯಪ್ಪ, ಪ್ರಭಾರ ಪಿಡಿಓ, ರಾಮ್‌ಕುಮಾರ, ಇಓ, ತಾಲ್ಲೂಕು ಪಂಚಾಯತ್‌ರವರ ವಿರುದ್ಧ ನೀಡಿದ್ದೇನೆ. ನಮ್ಮ ಗ್ರಾಮದ ನರಸೇಗೌಡ ಎನ್ನುವವರು ನಿವೇಶನ ಸಂಖ್ಯೆ:69ರಲ್ಲಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ಮನೆ ಕಟ್ಟುತ್ತಿದ್ದರು. ನಿವೇಶನ ಸಂಖ್ಯೆ:69ರ ಉತ್ತರ ದಕ್ಷಿಣ ಮತ್ತು ಪಶ್ಚಿಮ ದಿಕ್ಕಿಗೆ ಸರ್ಕಾರಿ ರಸ್ತೆ ಇರುತ್ತದೆ. ಸದರಿ ನಿವೇಶನದ ಪಶ್ಚಿಮ ಮತ್ತು ಉತ್ತರ ಭಾಗದ ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿ ಕಟ್ಟುತ್ತಿದ್ದರು. ಸದರಿ ನಿವೇಶನ ಸಂಖ್ಯೆ:69ರ ವಿಸ್ತೀರ್ಣ ಪೂರ್ವ ಪಶ್ಚಿಮ 24.50 ಅಡಿಗಳು ಮತ್ತು ಉತ್ತರ ದಕ್ಷಿಣ 36.50ಅಡಿಗಳು ಈ ಜಾಗದಲ್ಲಿ ಹಳೆ ಮನೆ ಇತ್ತು. ಆಸನೌ–1ರವರು ಸದರಿ ನರಸೇಗೌಡನಿಗೆ ಪೂರ್ವ ಪಶ್ಚಿಮ 27 ಅಡಿ ಮತ್ತು ಉತ್ತರ ದಕ್ಷಿಣ 55 ಅಡಿಗಳಿಗೆ ಹೊಸ ಮನೆ ಕಟ್ಟಲು ಪರವಾನಿಗೆಯನ್ನು ನೀಡಿದ್ದರು. ಇದರಿಂದಾಗಿ ಚರಂಡಿಗೂ ಸಹಾ ಜಾಗವಿಲ್ಲದಂತಾಗಿದೆ. ಉತ್ತರ ಭಾಗದಲ್ಲಿ ಇರುವಂತಹ ಮನೆಗಳಿಗೆ ಇದ್ದಂತಹ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟುತ್ತಿದ್ದರು. ಈ ಬಗ್ಗೆ ಪಂಚಾಯತಿಗೆ ದೂರನ್ನು ನೀಡಿದ್ದೆ. ಆಸನೌ–2ರವರ ಬಳಿಗೆ ಅನೇಕ ಬಾರಿ ಹೋಗಿ ಈ ರೀತಿ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ಮನೆ ಕಟ್ಟುತ್ತಿದ್ದಾರೆ ಬಂದು ಸ್ಥಳ ಪರಿಶೀಲಿಸಿ ತನಿಖೆ ಮಾಡಿ ಎಂದು ಕೇಳಿಕೊಂಡರು ಸಹಾ ಅವರು ಬಂದಿರುವುದಿಲ್ಲ, ಸ್ಥಳ ಪರಿಶೀಲಿಸಿರುವುದಿಲ್ಲ, ತನಿಖೆ ಮಾಡಿರುವುದಿಲ್ಲ ಮತ್ತು ಆಸನೌ–1ರವರ ವಿರುದ್ಧ ಕ್ರಮ ಕೈಗೊಂಡಿರುವುದಿಲ್ಲ. ನಂತರ ನಾನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದೂರು ಸಲ್ಲಿಸಿರುತ್ತೇನೆ.

ಸದರಿಯವರು ಆಸನೌ–2ರವರಿಗೆ ಫೋನ್ ಮಾಡಿ ಕ್ರಮ ಕೈಗೊಳ್ಳಲು ತಿಳಿಸಿದರು. ಆದರೂ ಸಹಾ ಆಸನೌ–2ರವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಈ ಸಂಸ್ಥೆಗೆ ದೂರನ್ನು ನೀಡಿದೆ".

17. ದೂರನ್ನು ನಿ.ಪಿ.1 ಎಂತಲೂ, ನಮೂನೆ–1 ಮತ್ತು 2ನ್ನು ನಿ.ಪಿ.2 ಮತ್ತು 3 ಎಂತಲೂ, ದೂರುನೊಂದಿಗೆ ಹಾಜರುಪಡಿಸಿದ ದಾಖಲಾತಿಗಳ ಪ್ರತಿಗಳನ್ನು ನಿ.ಪಿ.4 ಎಂತಲೂ, ಗ್ರಾಮ ಪಂಚಾಯತಿಯವರು ನೀಡಿದ್ದ ಹಳೆ ಮನೆಯ ನಿರ್ದಿಷ್ಟ ವಿಸ್ತೀರ್ಣವನ್ನು ನಿ.ಪಿ.4ರ ಪುಟ ಸಂಖ್ಯೆ 32 ರಲ್ಲಿ ನಿ.ಪಿ.4(ಎ) ಎಂತಲೂ, ದಿನಾಂಕ: 06/08/2002 ರಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ರವರು ಶ್ರೀ. ನರಸೇಗೌಡ ರಸ್ತೆಯ ಮೇಲೆ ನಿರ್ಮಿಸಿದ್ದ ಶೆಡ್ಡನ್ನು ತೆರವುಗೊಳಿಸಬೇಕೆಂದು ಮಾಡಿದ ಆದೇಶವನ್ನು ನಿ.ಪಿ.4(ಬಿ) ಎಂತಲೂ ಮತ್ತು ಸದರಿ ಶ್ರೀ. ನರಸೇಗೌಡನಿಗೆ ಆ.ಸ.ನೌ–1 ರವರು ನೀಡಿದ್ದ ಪರವಾನಿಗೆಯನ್ನು ನಿ.ಪಿ.4(ಸಿ) ಎಂತಲೂ ಗುರುತುಪಡಿಸಿಕೊಳ್ಳಲಾಗಿದೆ.

18. ನಿ.ಪಿ.1 ದೂರನ್ನು ನೋಡಲಾಗಿ, ಅದರಲ್ಲಿ ಶ್ರೀ. ನರಸೇಗೌಡ ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಸೆಟ್ ಬಾಕ್ ನಿಡದೇ ಮನೆ ಕಟ್ಟಿದ್ದು ಇದರಿಂದಾಗಿ ಗ್ರಾಮಸ್ಥರಿಗೆ ರಸ್ತೆ ಮತ್ತು ಚರಂಡಿ ಇಲ್ಲವಾಗಿರುತ್ತದೆ. ಈ ಬಗ್ಗೆ ಆ.ಸ.ನೌ–1 ಮತ್ತು 2 ರವರು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ, ರಸ್ತೆ ಒತ್ತುವರಿಯನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕೆಂದು ಕೇಳಿಕೊಳ್ಳಲಾಗಿದೆ. ಪ್ರಸ್ತುತ ದೂರನ್ನು ನಿರ್ದಿಷ್ಟವಾಗಿ ಶ್ರೀ. ಹನುಮಂತರಾಯಪ್ಪ, ಕಾರ್ಯದರ್ಶಿ, ಪ್ರಭಾರ ಪಿ.ಡಿ.ಓ ಮತ್ತು ಶ್ರೀ. ರಾಮಕುಮಾರ್, ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯತಿ, ತುಮಕೂರು ರವರ ವಿರುದ್ಧವೇ ನೀಡಲಾಗಿದೆ.

19. ದೂರಿನೊಂದಿಗೆ, ಹಾಜರುಪಡಿಸಿರುವ ದಾಖಲಾತಿಗಳ ಪ್ರತಿಗಳನ್ನು ಪರಿಶೀಲಿಸಲಾಗಿ, ಶ್ರೀ. ನರಸೇಗೌಡ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ, ಸೆಟ್ ಬಾಕ್ ಬಿಡದೇ ಮನೆ ಕಟ್ಟುತ್ತಿರುವ

ಬಾಬ್ತು ಪ್ರಸ್ತುತ ದೂರುದಾರ ಮತ್ತು ಇತರೆ ಗ್ರಾಮಸ್ಥರು, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಣಾಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ದೂರನ್ನು ನೀಡಿರುವುದು ಕಂಡುಬರುತ್ತದೆ. ನಿ.ಪಿ.4(ಎ) ದಾಖಲಾತಿ ದಿನಾಂಕ: 05/08/2002 ರಂದು ಶ್ರೀ. ನರಸೇಗೌಡರ ಸ್ವತ್ತಿನ ಬಾಬ್ತು ಮಾಡಿದ ನಡವಳಿಕೆಯಾಗಿರುತ್ತದೆ. ಇದರಂತೆ, ಆತನ ಹಳೆಯ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 24.5 ಅಡಿಗಳು ಉತ್ತರ ದಕ್ಷಿಣ 36.5 ಅಡಿಗಳು ಆಗಿರುತ್ತದೆ. ಈ ಹಳೆಯ ಸ್ವತ್ತನ್ನು ಕೆಡವಿ ಹೊಸ ಮನೆಯನ್ನು ಕಟ್ಟುವಾಗ ಆತ ಸೆಟ್ ಬಾಕ್ ಬಿಡದೇ ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿ ಕಟ್ಟಿದ್ದು, ಇದರಿಂದಾಗಿ ಗ್ರಾಮಸ್ಥರಿಗೆ ಚರಂಡಿ ಮತ್ತು ರಸ್ತೆ ಇಲ್ಲದಂತಾಗಿರುತ್ತದೆ ಎನ್ನುವುದು ಗ್ರಾಮಸ್ಥರ ಹಾಗೂ ದೂರುದಾರರ ಆಪಾದನೆ. ಈ ನರಸೇಗೌಡ ದಾರಿಯ ಮೇಲೆ ಅನಧೀಕೃತವಾಗಿ ಅಡ್ಡನಾಗಿ ಕಟ್ಟುತ್ತಿದ್ದಾಗ ದಿನಾಂಕ: 06/08/2002 ರಂದು ಕಾರ್ಯನಿರ್ವಾಹಕ ಅಧಿಕಾರಿಗಳು ಒಂದು ಆದೇಶವನ್ನು ಮಾಡಿ, ಶ್ರೀಮತಿ. ಕಮಲಮ್ಮ; ಶ್ರೀ. ನಾರಾಯಣ್ಣಪ್ಪಚಾರ್; ಶ್ರೀಮತಿ. ಮಹಾಲಕ್ಷ್ಮಮ್ಮ; ಶ್ರೀಮತಿ. ರಂಗಮ್ಮ ಎನ್ನುವ ಖಾತೆದಾರರ ದಕ್ಷಿಣ ಭಾಗದಲ್ಲಿರುವ ಸರ್ಕಾರಿ ದಾರಿಗೆ ಅಡ್ಡಲಾಗಿ ಶ್ರೀ. ನರಸೇಗೌಡ ರವರು ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸಲು ಕಾನೂನು ರೀತ್ಯಾ ಕ್ರಮ ಕೈಗೊಂಡು ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ಸಹಕಾರ ನೀಡಲು ಕೋರಿದೆ ಎಂದು ಆದೇಶಿಸಿರುತ್ತಾರೆ. ಈ ಆದೇಶವನ್ನು ದಿನಾಂಕ: 06/08/2002 ರಂದೇ ಮಾಡಲಾಗಿದೆ. ಮೇಲೆ ನಮೂದಿಸಿದ ದಾಖಲಾತಿಗಳನ್ನು ನೋಡಲಾಗಿ, ಸದರಿ ನರಸೇಗೌಡನ ಹಳೆಯ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 24.5 ಅಡಿಗಳು ಉತ್ತರ ದಕ್ಷಿಣ 36.5 ಅಡಿಗಳು ಎಂದಿದ್ದರೂ ಸಹ ಪ್ರಸ್ತುತ ಆ.ಸ.ನೌ–1 ರವರು ದಿನಾಂಕ: 30/01/2015 ರಂದು ಸದರಿ ನರಸೇಗೌಡನಿಗೆ 27x55 ವಿಸ್ತೀರ್ಣದ ನಿವೇಶನದಲ್ಲಿ ಮನೆ ಕಟ್ಟುವ ಪರವಾನಿಗೆಯನ್ನು ನೀಡಿರುತ್ತಾರೆ. ಸದರಿ ಪರವಾನಿಗೆಯನ್ನು ನಿ.ಪಿ.4(ಸಿ) ಎಂದು ಗುರುತುಪಡಿಸಿಕೊಳ್ಳಲಾಗಿದೆ. ಶ್ರೀ. ನರಸೇಗೌಡರು 27x55 ವಿಸ್ತೀರ್ಣದ ಜಾಗದಲ್ಲಿ ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿ ಸೆಟ್ ಬಾಕ್ ಬಿಡದೇ ಮನೆ ಕಟ್ಟಲು ಪ್ರಾರಂಭ ಮಾಡಿದ್ದರಿಂದ ಪುನಃ ದೂರುದಾರರು ಮತ್ತು ಗ್ರಾಮಸ್ಥರು, ಗ್ರಾಮ ಪಂಚಾಯತಿಗೆ ಮತ್ತು ಆ.ಸ.ನೌ–2 ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತಿ,

ತುಮಕೂರು ರವರಿಗೆ ದೂರನ್ನು ನೀಡಿರುತ್ತಾರೆ. ಸದರಿ ದೂರನ್ನು ದಿನಾಂಕ: 23/02/2015, 24/02/2015, 27/02/2015 ಮತ್ತು ಜಿಲ್ಲಾಧಿಕಾರಿಗಳಿಗೆ ದಿನಾಂಕ: 02/03/2015 ರಂದು ನೀಡಲಾಗಿರುತ್ತದೆ.

20. ದೂರುದಾರರು ತಮ್ಮ ಪಾಟಿ ಸವಾಲಿನಲ್ಲಿ ಆ.ಸ.ನೌ–2 ರವರು ಪಿ.ಡಿ.ಓ ಶ್ರೀ. ದೇವರಾಜು ರವರಿಗೆ ದೂರವಾಣಿ ಮೂಲಕ ಸ್ಥಳ ಪರಿಶೀಲಿಸಿ ಕಟ್ಟಡ ನಿರ್ಮಾಣ ಮಾಡುವುದನ್ನು ನೋಟಿಸು ನೀಡಿ ನಿಲ್ಲಿಸಬೇಕೆಂದು ಸೂಚನೆ ನೀಡಿದ್ದರು ಎನ್ನುವುದನ್ನು ಒಪ್ಪಿರುತ್ತಾರೆ. ಮುಂದುವರೆದು, ತಮ್ಮ ಪಾಟಿ ಸವಾಲಿನಲ್ಲಿ ದೂರುದಾರರು "ದಿ:6–4–2015 ರಂದು ಆಸನೌ–2 ರವರು ವರ್ಗಾವಣೆಗೊಂಡರು ಎನ್ನುವುದು ಸರಿ. ಅವರು ವರ್ಗಾವಣೆಯಾದ್ದರಿಂದ ನಾನು ನೀಡಿದ್ದಂತಹ ಅರ್ಜಿಯ ಮೇಲೆ ಯಾವುದೇ ಕ್ರಮವನ್ನು ಕೈಗೊಳ್ಳಲು ಆಸನೌ–2 ರವರಿಗೆ ಸಾಧ್ಯವಾಗಲಿಲ್ಲ ಎನ್ನುವುದು ಸರಿಯಲ್ಲ. ಏಕೆಂದರೆ ನಾನು ಅರ್ಜಿ ನೀಡಿದ ನಂತರವು ಆಸನೌ–2 ರವರಿಗೆ ಕ್ರಮಕೈಗೊಳ್ಳಲು ಎರಡು ತಿಂಗಳ ಕಾಲಾವಕಾಶವಿತ್ತು ಎನ್ನುತ್ತಾರೆ" ಎಂದು ನುಡಿದಿರುತ್ತಾರೆ. ಆ.ಸ.ನೌ–2 ರವರಿಗೆ ದೂರನ್ನು ನೀಡಿರುವುದು ದಿನಾಂಕ: 24/02/2015 ರಂದು. ಇಲ್ಲಿ ಆ.ಸ.ನೌ–2 ರವರು ತಮ್ಮ ಸಾಕ್ಷ್ಯ ನುಡಿದ್ದಿದ್ದು, "ನಾನು ತುಮಕೂರಿನ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಣಾಧಿಕಾರಿಯಾಗಿ ದಿ:31–01–2014 ರಿಂದ ದಿ:6–4–2015 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿ:7–3–2015 ರಂದು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು ರವರು ಫೋನ್ ಮೂಲಕ ಕ್ರಮವಹಿಸಲು ನಿರ್ದೇಶಿಸಿದ್ದರು. ನಾನು ದಿ:7–3–2015 ರಂದು ದೊಡ್ಡನಾರಮಂಗಲದ ಆಗಿನ ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ನೋಟೀಸ್ಸನ್ನು ಕಳುಹಿಸಿರುತ್ತೇನೆ. ಅವರ ಹೆಸರು ನನಗೆ ನೆನಪಿಲ್ಲ. ಸದರಿ ನೋಟೀಸ್ಸನ್ನು ನಾನೀಗ ಹಾಜರುಪಡಿಸುತ್ತಿದ್ದೇನೆ" ಎಂದು ನುಡಿದಿರುತ್ತಾರೆ. ಸದರಿ ನೋಟಿಸನ್ನು ನಿ.ಡಿ.2 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಅದನ್ನು ಪರಿಶೀಲಿಸಲಾಗಿ, ಈ ಆ.ಸ.ನೌ–2 ರವರು ದೊಡ್ಡನಾರವಂಗಲ ಗ್ರಾಮ ಪಂಚಾಯತಿಯ ಪಿ.ಡಿ.ಓ ರವರಿಗೆ ದಿನಾಂಕ: 07/03/2015 ರಂದು ಜ್ಞಾಪನವನ್ನು ಕಳುಹಿಸಿ "ಸದರಿ ಜಾಗವನ್ನು ನಿಯಮಾನುಸಾರ ಪರಿಶೀಲಿಸಿ ಸರ್ಕಾರಿ ಜಾಗವು

ಒತ್ತುವರಿಯಾಗದಂತೆ ಸಾರ್ವಜನಿಕರಿಗೆ ಅನಾನುಕೂಲವಾಗದೇ ಒತ್ತುವರಿಯನ್ನು ಕೂಡಲೇ ತೆರವುಗೊಳಿಸಿ ಈ ಕಛೇರಿಗೆ ಮರುಟಪಾಲಿನಲ್ಲಿ ಕ್ರಮವಹಿಸಿದ ಬಗ್ಗೆ ವರದಿಯನ್ನು ಸಲ್ಲಿಸಲು ಸೂಚಿಸಿದೆ: ತಪ್ಪಿದಲ್ಲಿ ಮುಂದಿನ ಹಾಗೂ ಹೋಗುಗಳಿಗೆ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಿ. ಮೇಲಾಧಿಕಾರಿಗಳಿಗೆ ಶಿಸ್ತಿನ ಕ್ರಮಕ್ಕಾಗಿ ಶಿಫಾರಸ್ಸು ಮಾಡಲಾಗುವುದೆಂದು ತಿಳಿಯುವುದು" ಎಂದು ತಿಳಿಸಿರುತ್ತಾರೆ. ದಿನಾಂಕ: 04/04/2015 ರಂದು ಆ.ಸ.ನೌ–2 ರವರು ಕರ್ತವ್ಯದಿಂದ ವರ್ಗಾವಣೆಯಾದ್ದರಿಂದ ಕರ್ತವ್ಯದಿಂದ ಬಿಡುಗಡೆ ಹೊಂದಿರುತ್ತಾರೆ. ಈ ಬಗ್ಗೆ ಮುಖ್ಯಕಾರ್ಯನಿರ್ವಾಣಾಧಿಕಾರಿಗಳು, ಜಿಲ್ಲಾ ಪಂಚಾಯತಿ, ತುಮಕೂರು ರವರು ಹೊರಡಿಸಿದ 'ಅಧಿಕೃತ ಜ್ಞಾಪನ'ವನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ.3 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಹೀಗಾಗಿ, ದಿನಾಂಕ: 07/03/2015 ರಂದು ಪಿ.ಡಿ.ಓ ರವರಿಗೆ ನೋಟಿಸು ಕಳುಹಿಸಿದ ನಂತರದಲ್ಲಿ ಆ.ಸ.ನೌ–2 ರವರು ದಿನಾಂಕ: 04/04/2015 ರಂದು ಕರ್ತವ್ಯದಿಂದ ಬಿಡುಗಡೆ ಹೊಂದಿದ್ದರಿಂದ ಕ್ರಮ ಕೈಗೊಳ್ಳಲು ಆಗಿರುವುದಿಲ್ಲ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ.

21. ಶಿಸ್ತು ಪ್ರಾಧಿಕಾರದ ಪರವಾಗಿ ಅಂದಿನ ಮುಖ್ಯಕಾರ್ಯನಿರ್ವಾಣಾಧಿಕಾರಿಯಾಗಿದ್ದಂತಹ ಶ್ರೀಮತಿ. ಮಮತ ರವರ ಸಾಕ್ಷ್ಯವನ್ನು ಮಾಡಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖೆ ಮಾಡಿ ವರದಿ ನೀಡಬೇಕೆಂದು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಣಾಧಿಕಾರಿಗೆ ಅನೇಕ ನೆನಪೋಲೆಗಳನ್ನು ಕಳುಹಿಸದ್ದೆ. ಅವರು ಅಪೂರ್ಣವಾದ ವರದಿಯನ್ನು ನೀಡಿದ್ದರು. ನಂತರ, ಕರ್ತವ್ಯ ಲೋಪ ಎಸಗಿರುವ ನೌಕರರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವ ಸಂಬಂಧಪಟ್ಟ ಆರೋಪ ಪಟ್ಟಿಯನ್ನು ಸಲ್ಲಿಸುವಂತೆ ತಿಳಿಸಿದ್ದೆ. ಆದರೆ, ಅವರು ಸ್ಪಷ್ಟವಾದ ವರದಿಯನ್ನು ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಇವರು ತಮ್ಮ ಪಾಟಿಸವಾಲಿನಲ್ಲಿ **"ನಾನು ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಆ.ಸ.ನೌ–2 ರವರು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರಲ್ಲಿಲ್ಲ"** ಎಂದು ನುಡಿದಿದ್ದಾರೆ. ಈ ಅಧಿಕಾರಿ ಅಲ್ಲಿ ಕರ್ತವ್ಯ ನಿರ್ವಹಿಸಿದ ಸಂದರ್ಭದಲ್ಲಿ, ಆ.ಸ.ನೌ–2 ರವರು ಕರ್ತವ್ಯ ನಿರ್ವಹಿಸುತ್ತಿರಲಿಲ್ಲಿ ಎಂದಾಯಿತು.

22. ಶಿಸ್ತು ಪ್ರಾಧಿಕಾರದ ಪರವಾಗಿ ಅಂದಿನ ಜಿಲ್ಲಾ ಪಂಚಾಯತಿ ಮುಖ್ಯಕಾರ್ಯನಿರ್ವಾಹಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಶ್ರೀ. ಗೋವಿಂದರಾಜು ರವರ ಸಾಕ್ಷ್ಯ ವಿಚಾರಣೆಯನ್ನು ಮಾಡಿದ್ದು, ಸದರಿಯವರು ಕೂಡ ತಮ್ಮ ಪಾಟಿ ಸವಾಲಿನಲ್ಲಿ "ದಿ:7-4-2015ರಂದು ಮಾನ್ಯ ಲೋಕಾಯುಕ್ತರು ಭೇಟಿ ನೀಡಿದ್ದ ಸಂದರ್ಭದಲ್ಲಿ ಆಸನೌ-2ರವರು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ಅವರಿಗೆ ವರ್ಗಾವಣೆಯಾಗಿತ್ತು. ಅವರಿಗೆ ನಾನು ಯಾವುದೇ ನೋಟೀಸ್ಸನ್ನು ಕಳುಹಿಸಿರಲಿಲ್ಲ" ಎಂದು ನುಡಿದಿರುತ್ತಾರೆ. ಹೀಗಾಗಿ, ದೂರುದಾರರು ದೂರನ್ನು ನೀಡಿದ ನಂತರದಲ್ಲಿ ಆ.ಸ.ನೌ-2 ರವರು ಕೂಡಲೇ ನೋಟಿಸನ್ನು ಪಿ.ಡಿ.ಓ ಅಂದರೆ ಆ.ಸ.ನೌ-1 ರವರಿಗೆ ಕಳುಹಿಸಿರುತ್ತಾರೆ. ನಂತರದಲ್ಲಿ ಅವರಿಗೆ ವರ್ಗಾವಣೆಯಾಗಿದ್ದರಿಂದ ಮುಂದಿನ ಕ್ರಮ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆ.ಸ.ನೌ-2 ರವರು ಕರ್ತವ್ಯ ಲೋಪ ಎಸಗಿರುತ್ತಾರೆ ಎನ್ನಲು ಬರುವುದಿಲ್ಲ.

23. ಆ.ಸ.ನೌ-1 ಶ್ರೀ. ಹನುಮಂತರಾಯಪ್ಪ, ಪ್ರಭಾರ ಕಾರ್ಯದರ್ಶಿ ಮತ್ತು ಪ್ರಭಾರ ಪಿ.ಡಿ.ಓ ರವರಾಗಿದ್ದು, ಈಗಾಗಲೇ ಮೇಲೆ ಗಮನಿಸಿದಂತೆ ಶ್ರೀ. ನರಸೇಗೌಡರ ಸ್ವತ್ತಿನ ಅಳತೆ ದಿನಾಂಕ: 05/08/2002ರ ದಾಖಲಾತಿಯಂತೆ, ಪೂರ್ವ ಪಶ್ಚಿಮ 24.5 ಅಡಿ ಮತ್ತು ಉತ್ತರ ದಕ್ಷಿಣ 36.5 ಅಡಿ ವಿಸ್ತೀರ್ಣ ಇದ್ದರೂ ಸಹ ಈ ಆ.ಸ.ನೌ-1 ದಿನಾಂಕ: 30/01/2015 ರಂದು ಮನೆ ಕಟ್ಟುವ ಪರವಾನಿಗೆಯನ್ನು 27x55 ಅಡಿ ವಿಸ್ತೀಣಕ್ಕಾಗಿ ನೀಡಿರುತ್ತಾರೆ. ಆ.ಸ.ನೌ-1 ಈ ರೀತಿಯಲ್ಲಿ ಹೆಚ್ಚಿನ ವಿಸ್ತೀರ್ಣ ನಮೂದಿಸಿ ಮನೆ ಕಟ್ಟಲು ಪರವಾನಿಗೆಯನ್ನು ನೀಡಿದ್ದರಿಂದ ಸದರಿ ಶ್ರೀ. ನರಸೇಗೌಡ ಸರ್ಕಾರಿ ರಸ್ತೆಯನ್ನು ಒತ್ತುವರಿ ಮಾಡಿ, ಸೆಟ್ ಬಾಕ್ ಬಿಡದೇ ಮನೆ ಕಟ್ಟಲು ಕಾರಣಕರ್ತರಾಗಿರುತ್ತಾರೆ. ಈ ಪರವಾನಿಗೆಯಲ್ಲಿ ಆ.ಸ.ನೌ-1 ರವರ ಸಹಿ ಇರುತ್ತದೆ. ಈ ಪ್ರಕರಣದಲ್ಲಿ ಆ.ಸ.ನೌ-1 ರವರು ತಮ್ಮ ಆಕ್ಷೇಪಣೆಯನ್ನಾಗಲೀ, ಲಿಖಿತ ಹೇಳಿಕೆಯನ್ನಾಗಲೀ ಸಲ್ಲಿಸಿರುವುದಿಲ್ಲ. ತಮ್ಮ ಪರವಾಗಿ ಮೌಖಿಕ ಸಾಕ್ಷ್ಯವನ್ನಾಗಲೀ, ದಾಖಲಾತಿಗಳ ಸಾಕ್ಷ್ಯವನ್ನಾಗಲೀ ನೀಡಿರುವುದಿಲ್ಲ.

24. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ–1 ರವರ ವಿರುದ್ಧ ಆಪಾದಿಸಲಾದ ಆರೋಪವನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸಿರುತ್ತದೆ. ಆದರೆ, ಆ.ಸ.ನೌ–2 ರವರ ವಿರುದ್ಧ ಹೊರಿಸಲಾದ ಆರೋಪವನ್ನು ರುಜುವಾತುಪಡಿಸಿರುವುದಿಲ್ಲ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಆ.ಸ.ನೌ–1 ರವರಿಗೆ ಸಂಬಂಧಪಟ್ಟಂತೆ ಸಕಾರಾತ್ಮಕವಾಗಿಯೂ, ಆ.ಸ.ನೌ–2 ಸಂಬಂಧಪಟ್ಟಂತೆ ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

25. **ಅಂಶ–2:** ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ಶಿಸ್ತು ಪ್ರಾಧಿಕಾರದವರು ಆಪಾದಿತ ಆ.ಸ.ನೌ – (1) ಶ್ರೀ. **ಹನುಮಂತರಾಯಪ್ಪ,** ಪ್ರಭಾರ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ದೊಡ್ಡನಾರವಂಗಲ ಗ್ರಾಮ ಪಂಚಾಯತಿ, ತುಮಕೂರು ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪವನ್ನು ಶಿಸ್ತು ಪ್ರಾಧಿಕಾರವು ಸೂಕ್ತ ಸಾಕ್ಷ್ಯಧಾರಗಳನ್ನು ನೀಡಿ **ರುಜುವಾತುಪಡಿಸಿರುತ್ತದೆ** ಮತ್ತು (2) ಶ್ರೀ. **ರಾಮಕುಮಾರ್,** ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತುಮಕೂರು ಜಿಲ್ಲೆ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ಶಿಸ್ತುಪ್ರಾಧಿಕಾರವು ಸೂಕ್ತ ಸಾಕ್ಷ್ಯಧಾರಗಳನ್ನು ನೀಡಿ **ರುಜುವಾತುಪಡಿಸಿರುವುದಿಲ್ಲ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

22/1/21

**(ಕೆ.ಭಾಗ್ಯ)**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Parthasarathi D S/o Doddarangappa, Doddanaravangala, Tumkur Taluk & District. |
| | **PW-2** | Smt. Mamatha D/o Ramachandregowda, Mission Director, NRLM, Sheshadripuram, Bengaluru. |
| | **PW-2** | Sri. Govindaraju S/o Narasimaiah, Retired Chief Executive Officer, Zilla Panchayath, Tumkur. |
| 2 | **Documents marked on behalf of the Disciplinary Authority Ex.P-1 to Ex.P-6** | |
| | **Ex.P.1** | Complaint given to this institution with Signature dtd: 06/04/2015. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4, 4(a), 4(b) & 4(c)** | Documents including Ex.P.4(a) – old house specific area given by Gram Panchayath, Ex.P.4(b) – Order of EO, TP, Tumkur & Ex.P.4(c) – License given by DGO-1. |
| | **Ex.P.5** | Interim report submitted by CEO, ZP, Tumkur. |
| | **Ex.P.6** | Order of EO, TP, Tumkur. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. H Ramkumar S/o V.C Hanumanthappa, EO, TP, Ajjampura. |
| 4 | **Documents marked on behalf of the DGOs through the complainant** | |

| | | |
|---|---|---|
| | **Ex.D.1** | Order of EO, TP, Tumkur. |
| | **Ex.D.2** | Memorandum/Letter dtd: 07/03/2015 issued by EO, TP, Tumkur. |
| | **Ex.D.3** | Official Memorandum dtd: 04/04/2015 issued by CEO, ZP, Tumkur. |

Dated this the 22nd January, 2021

22.1.21

**(K.BHAGYA)**
Additional Registrar Enquiries-14,
Karnataka Lokayukta,
Bangalore.